ಶ್ರೀ ಬಸವನಗೌಡ ರಾ. ಪಾಟೀಲ್ : ವಿಜಾಪುರ ನಗರದ ಮಧ್ಯಭಾಗದ ಗಾಂಧಿಚೌಕ ಪೋಲೀಸ್ ಠಾಣೆಯ ಹತ್ತಿರ ಸಾಕಷ್ಟು ಜಾಗದ ಸೌಲಭ್ಯ ಇದೆ. ಸರ್ಕಾರ ದಯಮಾಡಿ ಆ ಒಂದು ಸ್ಥಳದಲ್ಲಿ ಮಾಡಿದರೆ, ಅದು ನಗರದ ಮಧ್ಯಕೇಂದ್ರವಾಗಿರುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಸರ್ಕಾರಿ ಪೋಲೀಸ್ ಸ್ಟೇಷನ್ ಹತ್ತಿರ ಜಮೀನು ಇರುವುದರಿಂದ ಅದನ್ನು ಪರಿಶೀಲಿಸಬಹುದೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಲ್ಲಿರತಕ್ಕಂಥ ಕಟ್ಟಡಗಳನ್ನು ತೆಗೆದು ಬಸ್ ನಿಲ್ದಾಣವನ್ನು ಮಾಡುವುದಕ್ಕೆ ಅನುಕೂಲವಾಗುವುದಾದರೆ ನಾನು ಪ್ರಾರಂಭ ಮಾಡುತ್ತೇನೆ.

ಸುಳ್ಯ ತಾಲ್ಲೂಕಿನ ರಸ್ತೆ ದುರಸ್ಥಿಗಾಗಿ ಎ.ಪಿ.ಎಂ.ಸಿ.ಯು ಬಿಡುಗಡೆ ಮಾಡಿದ ಹಣ

355 - ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸುಳ್ಯ ತಾಲ್ಲೂಕಿನ 5 ರಸ್ತೆಗಳು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಗೆ ಸೇರಿದ್ದು, ಈವರೆಗೆ ಸದರಿ ರಸ್ತೆಯ ದುರಸ್ಥಿ ಕಾಮಗಾರಿಯನ್ನು ಪ್ರಾರಂಭ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಯಾವಾಗ ಪ್ರಾರಂಭಮಾಡಲಾಗುವುದು?*

ಇ) *ಕೃಷಿ ಮಾರುಕಟ್ಟೆ ಇಲಾಖೆಯ ವತಿಯಿಂದ ಸುಳ್ಯ ತಾಲ್ಲೂಕಿನ ರಸ್ತೆಗಳ ಅಭಿವೃದ್ಧಿಗೆ ತೆಗದಿಡಲಾದ ಹಣವೆಷ್ಟು?*

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು.

ಆ) ಕೆಲಸ ಪ್ರಾರಂಭಿಸಲು ದಿನಾಂಕ 27.4.98ರಂದು ಆದೇಶ ನೀಡಲಾಗಿದೆ.

ಇ) 1995-96ಕ್ಕೆ ರೂ. 15.00 ಲಕ್ಷ

1996-97ಕ್ಕೆ ರೂ. 15.00 ಲಕ್ಷ

ಶ್ರೀ ಎಸ್. ಅಂಗಾರ : ಮಾನ್ಯ ಅಧ್ಯಕ್ಷರೆ, ಸುಳ್ಯ ತಾಲ್ಲೂಕಿನ 5 ರಸ್ತೆಗಳು ಎ.ಪಿ.ಎಂ.ಸಿ. ವ್ಯಾಪ್ತಿಗೆ ಸೇರಿದ್ದು, ಸದರಿ ದುರಸ್ಥಿ ಕಾಮಗಾರಿ ಪ್ರಾರಂಭ ಮಾಡಿಲ್ಲವೆನ್ನುವ ಪ್ರಶ್ನೆಯನ್ನು ಹಾಕಿದ್ದೇನೆ. ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ದಿನಾಂಕ 27.4.1998ಕ್ಕೆ ಆದೇಶವನ್ನು ನೀಡಿದ್ದೇವೆಂದು ಹೇಳಿದ್ದಾರೆ. ಕಳೆದ ಎರಡು ವರ್ಷಗಳಿಂದ ಯಾವುದೇ ರಸ್ತೆಗಳ ದುರಸ್ಥಿ ಕಾಮಗಾರಿ ಆಗಿಲ್ಲ. ಅಲ್ಲಿ ಸಾರ್ವಜನಿಕರು ಸತತವಾಗಿ ವಿರೋಧವನ್ನು ವ್ಯಕ್ತಪಡಿಸಿ ಹೋರಾಟವನ್ನೂ ಕೂಡ ಮಾಡಿದ್ದಾರೆ. ಆದಷ್ಟು ಶೀಘ್ರದಲ್ಲಿ

ಕೆಲಸವನ್ನು ಪ್ರಾರಂಭ ಮಾಡಬೇಕು. ಆ ರಸ್ತೆ ದುರಸ್ಥಿ ಕಾಮಗಾರಿಗಾಗಿ ಅನುದಾನ ಬಿಡುಗಡೆ ಮಾಡಬೇಕೆಂಬ ಒತ್ತಾಯವನ್ನೂ ಕೂಡ ತಮ್ಮ ಮೂಲಕ ಮಾನ್ಯ ಸಚಿವರಿಗೆ ಮಾಡುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) (ಕೃಷಿ ಮಾರುಕಟ್ಟೆ ಸಚಿವರ ಪರವಾಗಿ) : ಅಧ್ಯಕ್ಷರೆ, ಆ ರಸ್ತೆಗಳನ್ನು ಶೀಘ್ರದಲ್ಲಿ ಪ್ರಾರಂಭ ಮಾಡುತ್ತೇವೆ. ಆದರೆ ಆ ರಸ್ತೆಗಳ ದುರಸ್ಥಿ ಕಾಮಗಾರಿ ಮಾತ್ರ ಎ.ಪಿ.ಎಂ.ಸಿ. ಮಾಡುವುದಕ್ಕಾಗುವುದಿಲ್ಲ. ಆಯಾಯ ಇಲಾಖೆಗಳವರು ದುರಸ್ಥಿ ಕೆಲಸವನ್ನು ಪ್ರಾರಂಭ ಮಾಡುತ್ತಾರೆ. ಶೀಘ್ರದಲ್ಲಿಯೇ ಆ ಕೆಲಸವನ್ನು ಮಾಡುವುದಕ್ಕೆ ಸಂಬಂಧಪಟ್ಟ ಇಲಾಖೆಗಳವರಿಗೆ ಹೇಳುತ್ತೇವೆ.

ಶ್ರೀ ಎಸ್. ಅಂಗಾರ : ಸಚಿವರು ಹೇಳುತ್ತಾರೆ, ಎ.ಪಿ.ಎಂ.ಸಿ.ಯವರು ಮಾಡುವುದಕ್ಕಾಗುವುದಿಲ್ಲವೆಂದು ಬೇರೆ ಇಲಾಖೆಯವರು ಆ ದುರಸ್ಥಿ ಕಾಮಗಾರಿಯನ್ನು ಮಾಡುವುದಕ್ಕೆ ಒಪ್ಪುವುದಿಲ್ಲ. ನೇರವಾಗಿ ಎ.ಪಿ.ಎಂ.ಸಿ ಗೆ ರಸ್ತೆಗೆ ಅನುದಾನ ಬಿಡುಗಡೆಯಾಗಿದೆ. ಡಾಂಬರೀಕರಣ ಎ.ಪಿ.ಎಂ.ಸಿ -ಯವರು ಮಾಡಿ, ಉಳಿದ ಕಾಮಗಾರಿಗಳನ್ನು ಬೇರೆ ಇಲಾಖೆಯವರು ಮಾಡುವುದಕ್ಕೆ ಒಪ್ಪುವುದಿಲ್ಲ. ಇದರ ಬಗ್ಗೆ ಅವರು ಸ್ಪಷ್ಟವಾಗಿ ಉತ್ತರವನ್ನು ಹೇಳಬೇಕು.

ಶ್ರೀ ಎಸ್. ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಈ ರಸ್ತೆಗಳು ಕೆಲವು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಇವೆ, ಪಿಡಬ್ಲ್ಯೂಡಿ ರಸ್ತೆಗಳನ್ನು ತೆಗೆದುಕೊಂಡಿದ್ದೇವೆ. ಆ ರಸ್ತೆಗಳನ್ನು ಪ್ರಾರಂಭ ಮಾಡುವುದಕ್ಕೆ ಎಪಿಎಂಸಿಯಿಂದ ನಾವು ತೆಗೆದುಕೊಂಡಿದ್ದೇವೆ. ಮುಂದೆ ಆ ರಸ್ತೆಯ ರಿಪೇರಿಯನ್ನು ಸಂಬಂಧಪಟ್ಟ ಇಲಾಖೆಯಿಂದ ಮಾಡಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಎಸ್. ಅಂಗಾರ : ಸನ್ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಎಂದರೆ ಒಮ್ಮೆ ಯಾವುದೇ ಒಂದು ರಸ್ತೆಯು ಎಪಿಎಂಸಿಗೆ ಹ್ಯಾಂಡ್ ಓವರ್ ಆಯಿತು ಎಂದು ಹೇಳಿದ ಮೇಲೆ ಜಿಲ್ಲಾ ಪಂಚಾಯತ್‌ನವರು ಆ ರಸ್ತೆ ನಮ್ಮದು ಅಲ್ಲವೆಂದು ಹೇಳುವಂತಹ ವಿಚಾರಗಳನ್ನು ಈ ಸಭೆಗೆ ಹೇಳುತ್ತಿದ್ದೇನೆ. ಕಳೆದ ಬಾರಿ ಕೊಟ್ಟಂತಹ ಅನುದಾನದಲ್ಲಿಯೂ ಕೂಡ ನಾವು ಮಾಡಿದಂತಹ ಜಿಲ್ಲಾ ಪಂಚಾಯತ್ ರಸ್ತೆಗಳನ್ನು ಎಪಿಎಂಸಿಗೆ ಹಸ್ತಾಂತರ ಮಾಡಿದ ಮೇಲೆ ಪುನಃ ಅದನ್ನು ಮೆಂಟೆನನ್ಸ್‌ಗಾಗಿ ಹಸ್ತಾಂತರ ಮಾಡಬೇಕೆಂದು ಹೇಳಿದರೆ ಅದಕ್ಕೆ ಸರ್ಕಾರದಿಂದ ಅಗತ್ಯವಾದ ಸುತ್ತೋಲೆಗಳನ್ನು ತಾವು ಕಳುಹಿಸಬೇಕು. ಕೇವಲ ಮಾರ್ಗಗಳ ರಚನೆ ಮಾಡಿದ್ದಾರೆ. ಅದನ್ನು ದುರಸ್ಥಿ ಮಾಡಲಿಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಪಂಚಾಯತ್‌ನವರು ಮಾಡಬೇಕೆಂದು ಹೇಳುವಂತಹ ವಿಶೇಷ ಸುತ್ತೋಲೆಯನ್ನು ಕಳುಹಿಸಬೇಕಾಗುತ್ತದೆ. ಇಲ್ಲದಿದ್ದರೆ ಅವರು ಮಾಡುವುದಿಲ್ಲ. ಯಾವುದೇ ಎಪಿಎಂಸಿ ಮಾರ್ಗಗಳು ರಚನೆಯಾದ ನಂತರ ಅದರ ರಿಪೇರಿ ಕೆಲಸಗಳನ್ನು ಜಿಲ್ಲಾ ಪಂಚಾಯತ್‌ನವರು ಮಾಡುವಂತಹ ಸುತ್ತೋಲೆಗಳನ್ನು ಕಳುಹಿಸಿಬೇಕೆಂದು ಸರ್ಕಾರವನ್ನು ಆಗ್ರಹಪಡಿಸುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಸನ್ಮಾನ್ಯ ಅಧ್ಯಕ್ಷರೆ, ಈ 50 ಕಿ.ಮೀ. ರಸ್ತೆಗಳನ್ನು ರಿಪೇರಿಗೆಂದು ತೆಗೆದುಕೊಂಡು ನಾಲ್ಕು ವರ್ಷಗಳಾಗಿದೆ. ಆದರೆ ನೀವು ರಸ್ತೆ ರಿಪೇರಿಗೆಂದು 15 ಲಕ್ಷ ರೂಪಾಯಿಗಳನ್ನು

ಒಂದು ವರ್ಷಕ್ಕೆ ಮಾತ್ರ ಕೊಟ್ಟಿದ್ದೀರಿ. ಎರಡನೇ ವರ್ಷಕ್ಕೆ ಅನುದಾನ ಬಿಡುಗಡೆಯಾಗಿದೆ, ಆದರೆ ರಸ್ತೆ ರಿಪೇರಿ ಪ್ರಾರಂಭವಾಗಿಲ್ಲ. ಇನ್ನೂ ಎರಡು ವರ್ಷದ ಹಣ ಬರಬೇಕಾಗಿದೆ. ಇವತ್ತು ನಮಗೆ ಹಳ್ಳಿಗಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ, ಅಷ್ಟು ರಸ್ತೆಗಳು ಹಾಳಾಗಿವೆ. ಜಿಲ್ಲಾ ಪಂಚಾಯತ್‌ನವರು ಆ ರಸ್ತೆಯನ್ನು ರಿಪೇರಿ ಮಾಡಿಸುತ್ತಿಲ್ಲ. ನೀವು ರಸ್ತೆ ದುರಸ್ಥಿಗೆ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ರಸ್ತೆ ರಿಪೇರಿಗೆಂದು ಕೊಡುವಂತಹ ಹಣವನ್ನೂ ಸಹ ಕೊಡುತ್ತಿಲ್ಲ. ನೀವು ಪ್ರತಿ ವರ್ಷ ರಸ್ತೆ ರಿಪೇರಿಗೆಂದು 15 ಲಕ್ಷ ರೂಗಳನ್ನು ಕೊಡುತ್ತೀರೆಂದು ಹೇಳಿದ್ದಿರಿ. ಆ ಹಣವನ್ನೂ ಸಹ ಕೊಡುತ್ತಿಲ್ಲ. ಅದರಿಂದಾಗಿ ನಮ್ಮ ಕ್ಷೇತ್ರದ ಎಪಿಎಂಸಿ ರಸ್ತೆಗಳು ಎಲ್ಲಾ ಹಾಳಾಗಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಹೇಳಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವ ವಿಚಾರ ಸರಿ ಇದೆ. ಈಗಾಗಲೇ ಸರ್ಕಾರದಿಂದ ಸುತ್ತೋಲೆಯನ್ನು ಹೊರಡಿಸಿದ್ದೇವೆ. ಈ ಸುತ್ತೋಲೆಯ ಪ್ರಕಾರ ಆ ರಸ್ತೆಗಳನ್ನು ಸಂಬಂಧಪಟ್ಟ ಇಲಾಖೆಯವರು ರಿಪೇರಿ ಮಾಡಿಸುವ ವ್ಯವಸ್ಥೆಯನ್ನು ಶೀಘ್ರದಲ್ಲೇ ಮಾಡಿಸುತ್ತೇನೆ.

ಕೊಡಗಿನಲ್ಲಿ ತೋಟಗಾರಿಕಾ ಫಾರಂಗಳು

354 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ನಿಯಂತ್ರಣದಲ್ಲಿ ಎಷ್ಟು ತೋಟಗಾರಿಕೆ ಇಲಾಖೆಗಳು (ಫಾರಂ) ಕೊಡಗು ಜಿಲ್ಲೆಯಲ್ಲಿ ಇವೆ? ಅವು ಯಾವುವು?

ಆ) ಈ ತೋಟಗಾರಿಕೆಯ ಅಡಿಯಲ್ಲಿ ಎಷ್ಟು ಎಕರೆ ಜಮೀನು ಇದೆ?

ಇ) ಈ ತೋಟಗಾರಿಕೆ ಇಲಾಖೆಗೆ (ಫಾರಂ) ವರ್ಷ ಪ್ರತಿ ಎಷ್ಟು ಹಣ ಬಿಡುಗಡೆ ಮಾಡಲಾಗುತ್ತಿದೆ? (ಕಳೆದ ಮೂರು ವರ್ಷದ ವಿವರ ನೀಡುವುದು)

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಕೊಡಗು ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ರಾಜ್ಯ ವಲಯಕ್ಕೆ ಸೇರಿದ 5 ಕ್ಷೇತ್ರ ಸಸ್ಯಾಗಾರಗಳು ಮತ್ತು ಜಿಲ್ಲಾ ವಲಯಕ್ಕೆ ಸೇರಿದ 4 ಕ್ಷೇತ್ರ : ಸಸ್ಯಾಗಾರಗಳು ಇರುತ್ತವೆ. ಅನುಬಂಧ - 1ರಲ್ಲಿ ವಿವರ ನೀಡಿದೆ.

ಆ) 540 ಎಕರೆ.

ಇ) ಈ ತೋಟಗಾರಿಕೆ ಕ್ಷೇತ್ರಗಳ ಅಭಿವೃದ್ಧಿಗಾಗಿ : ನಿರ್ವಹಣೆಗಾಗಿ ಕಳೆದ ಮೂರು ವರ್ಷಗಳಿಂದ ಬಿಡುಗಡೆ ಮಾಡಿದ ಹಣದ ವಿವರ ಈ ಕೆಳಕಂಡತಿರುತ್ತದೆ.